**All India Radio: Bangalore**
**National Bulletins In Kannada**
**20.05.2025 / 19.35 hrs**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**20.05.2025 / 19.35 hrs**

**<><*<><>*><>**

**ಮುಖ್ಯಾಂಶಗಳು**

**೧. ಆರೋಗ್ಯಕರ ಪ್ರಪಂಚದ ಭವಿಷ್ಯವು ಸಮಗ್ರ ದೃಷ್ಟಿಕೋನ, ಸೇರ್ಪಡೆ ಮತ್ತು ಸಹಯೋಗವನ್ನು ಅವಲಂಬಿಸಿದೆ - ಪ್ರಧಾನಿ ನರೇಂದ್ರ ಮೋದಿ**

**೨. ಸಾಂಪ್ರದಾಯಿಕವಾಗಿ ನಿರ್ಮಿಸಲಾದ ಪ್ರಾಚೀನ ಹೊಲಿಗೆ ಹಡಗು ಐಎನ್‌ಎಸ್‌ಸಿ ಕೌಂಡಿನ್ಯ ನಾಳೆ ಕರ್ನಾಟಕದ ನೌಕಾ ನೆಲೆಗೆ ಸೇರ್ಪಡೆ**

**೩. ಭಾರತೀಯ ಸ್ಪರ್ಧಾತ್ಮಕ ಆಯೋಗದ ೧೬ನೇ ವಾರ್ಷಿಕೋತ್ಸವಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ**

**೪. ಐಪಿಎಲ್ ಟಿ-೨೦ ಕ್ರಿಕೆಟ್; ಬೆಂಗಳೂರಿನಲ್ಲಿ ನಡೆಯಬೇಕಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು - ಸನ್ ರೈಸರ್ಸ್ ಹೈದರಾಬಾದ್ ಪಂದ್ಯ ಲಕ್ನೋಗೆ ಸ್ಥಳಾಂತರ**

**<><*<><>*><>**

ಆರೋಗ್ಯಕರ ಪ್ರಪಂಚದ ಭವಿಷ್ಯವು ಸೇರ್ಪಡೆ, ಸಮಗ್ರ ದೃಷ್ಟಿಕೋನ ಮತ್ತು ಸಹಯೋಗವನ್ನು ಅವಲಂಬಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಜಾಗತಿಕ ದಕ್ಷಿಣವು, ವಿಶೇಷವಾಗಿ ಆರೋಗ್ಯ ಸವಾಲುಗಳಿಂದ ಪ್ರಭಾವಿತವಾಗಿದೆ. ಭಾರತದ ವಿಧಾನವು ಪುನರಾವರ್ತಿತ, ಅಳೆತೆಗೊಳಪಡುವ ಮತ್ತು ಸುಸ್ಥಿರ ಮಾದರಿಗಳನ್ನು ನೀಡುತ್ತದೆ ಎಂದು ಒತ್ತಿ ಹೇಳಿದರು. ಈ ತಿಂಗಳ ೧೯ ರಿಂದ ೨೭ ರವರೆಗೆ ಸ್ವಿಟ್ಜರ್‌ಲ್ಯಾಂಡ್‌ನ ಜಿನೀವಾದಲ್ಲಿ ನಡೆಯುತ್ತಿರುವ ವಿಶ್ವ ಆರೋಗ್ಯ ಸಂಸ್ಥೆಯ ಎಪ್ಪತ್ತೆಂಟನೇ ಅಧಿವೇಶನದಲ್ಲಿ ವರ್ಚುವಲ್ ಮೂಲಕ ಭಾಗವಹಿಸಿ ಅವರು ಮಾತನಾಡಿದರು. ದೇಶಾದ್ಯಂತ ಸಾವಿರಾರು ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳ ವಿಶಾಲ ಜಾಲವಿರುವುದರಿಂದ ಭಾರತದ ಆರೋಗ್ಯ ಸುಧಾರಣೆಯಲ್ಲಿ ಸೇರ್ಪಡೆಯು ಪ್ರಮುಖ ತಿರುಳಾಗಿದೆ ಎಂದು ಪ್ರತಿಪಾದಿಸಿದ್ದಾರೆ. ೫೮೦ ದಶಲಕ್ಷ ಜನರನ್ನು ಒಳಗೊಳ್ಳುವ ವಿಶ್ವದ ಅತಿದೊಡ್ಡ ಆರೋಗ್ಯ ವಿಮಾ ಯೋಜನೆ 'ಆಯುಷ್ಮಾನ್ ಭಾರತ್' ಅನ್ನು ಉಚಿತ ಚಿಕಿತ್ಸೆ ನೀಡಲು ನಡೆಸಲಾಗುತ್ತಿದೆ ಎಂದು ತಿಳಿಸಿದರು.

**ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೪ ಸೆಕೆಂಡ್ಸ್)**

ಕ್ಯಾನ್ಸರ್, ಮಧುಮೇಹ ಮತ್ತು ಅಧಿಕ ರಕ್ತದೊತ್ತಡದಂತಹ ರೋಗಗಳ ಆರಂಭಿಕ ತಪಾಸಣೆ ಮತ್ತು ಪತ್ತೆಹಚ್ಚುವಿಕೆಯನ್ನು ಸುಗಮಗೊಳಿಸುವ ಸಾವಿರಾರು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಭಾರತದ ವ್ಯಾಪಕ ಜಾಲದ ಬಗ್ಗೆ ಇದೇ ಸಂದರ್ಭದಲ್ಲಿ ಪ್ರಧಾನಿ ತಿಳಿಸಿದರು. 'ಆರೋಗ್ಯಕ್ಕಾಗಿ ಒಂದು ಜಗತ್ತು' ಎಂಬ ಈ ವರ್ಷದ ಧ್ಯೇಯವಾಕ್ಯವನ್ನು ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ, ಜಾಗತಿಕ ಆರೋಗ್ಯಕ್ಕಾಗಿ ಭಾರತದ ದೃಷ್ಟಿಕೋನಕ್ಕೆ ಈ ವಿಷಯವು ಹೊಂದಿಕೆಯಾಗುತ್ತದೆ ಎಂದು ಹೇಳಿದರು.

**<><*<><>*><>**

ಸಾಂಪ್ರದಾಯಿಕವಾಗಿ ನಿರ್ಮಿಸಲಾದ ಪ್ರಾಚೀನ ಹೊಲಿಗೆ ಹಡಗನ್ನು ಭಾರತೀಯ ನೌಕಾಪಡೆಯು ನಾಳೆ ಕರ್ನಾಟಕದ ನೌಕಾ ನೆಲೆಗೆ ಸೇರ್ಪಡೆ ಮಾಡಲಿದೆ. ಈ ಕಾರ್ಯಕ್ರಮದಲ್ಲಿ ಕೇಂದ್ರ ಸಾಂಸ್ಕೃತಿಕ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಹೊಲಿಗೆ ಹಾಕಿ ಸಿದ್ಧಪಡಿಸಿದ ಹಡಗು ಅಜಂತಾ ಗುಹೆಗಳ ವರ್ಣಚಿತ್ರದಿಂದ ಪ್ರೇರಿತವಾಗಿದ್ದು ೫ ನೇ ಶತಮಾನದ ಹಡಗಿನ ಪ್ರತಿಕೃತಿಯಾಗಿದೆ. ಸಾಂಪ್ರದಾಯಿಕ ಹಡಗು ನಿರ್ಮಾತೃ ಬಾಬು ಶಂಕರನ್ ನೇತೃತ್ವದ ಕೇರಳದ ಕುಶಲಕರ್ಮಿಗಳು ಸಂಪೂರ್ಣವಾಗಿ ಸಾಂಪ್ರದಾಯಿಕ ವಿಧಾನದಿಂದ ಕಚ್ಚಾ ವಸ್ತುಗಳನ್ನು ಬಳಸಿ ಇದನ್ನು ತಯಾರು ಮಾಡಿದ್ದಾರೆ.

**<><*<><>*><>**

ನವದೆಹಲಿಯಲ್ಲಿಂದು 'ಡಿಪೋ ದರ್ಪಣ್', 'ಅನ್ನ ಮಿತ್ರ' ಮತ್ತು 'ಅನ್ನ ಸಹಾಯತಾ' ಆಪ್‌ಗಳನ್ನು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ್ ಜೋಶಿ ಬಿಡುಗಡೆ ಮಾಡಿದರು. ಡಿಜಿಟಲ್ ನಾವೀನ್ಯತೆಯ ಮೂಲಕ ದೇಶದ ಆಹಾರ ಭದ್ರತೆಯನ್ನು ಮುನ್ನಡೆಸುವ ಕೇಂದ್ರ ಸರ್ಕಾರದ ಗುರಿಯೊಂದಿಗೆ ಈ ಆಪ್‌ಗಳು ಹೊಂದಿಕೆಯಾಗುತ್ತವೆ. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಇ-ಆಡಳಿತದ ಸಾಧನವಾಗಿ ಈ ಆಪ್‌ಗಳು ದೇಶದ ಕೃಷಿ ಮೂಲಸೌಕರ್ಯ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಆಧುನೀಕರಿಸಲು ಸಹಾಯ ಮಾಡುತ್ತವೆ. ಹೆಚ್ಚಿದ ದಕ್ಷತೆ, ಸೇವಾ ಗುಣಮಟ್ಟ, ಮೂಲಸೌಕರ್ಯ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಬೆಳೆಸುತ್ತವೆ ಸಹಕಾರಿಯಾಗಲಿವೆ ಅವರು ಹೇಳಿದರು. ಇತ್ತೀಚಿನ ತಂತ್ರಜ್ಞಾನದ ಮೂಲಕ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಈ ಆಪ್‌ಗಳು ಸುಗಮಗೊಳಿಸುತ್ತವೆ. ಕಟ್ಟಕಡೆಯ ವ್ಯಕ್ತಿಗೂ ಪ್ರತಿಯೊಂದು ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ಬದ್ಧತೆಯನ್ನು  ಸಚಿವರು ಪುನರುಚ್ಚರಿಸಿದರು. ಡಿಪೋ ದರ್ಪಣ್ ಮೊಬೈಲ್ ಆಪ್‌ಗಳು ಮೇಲ್ವಿಚಾರಣಾ ಅಧಿಕಾರಿಗಳಿಗೆ ಯಾವುದೇ ಸಮಯದಲ್ಲಿ, ಎಲ್ಲಿಯಾದರೂ ಗೋದಾಮಿನ ಕಾರ್ಯಕ್ಷಮತೆಯನ್ನು ಟ್ರ್ಯಾಕ್ ಮಾಡಲು ಅನುವು ಮಾಡಿಕೊಡುತ್ತದೆ.  ಮತ್ತೊಂದೆಡೆ, 'ಅನ್ನ ಸಹಾಯತಾ' ಆಪ್, ಇದೇ ಮೊದಲ ಬಾರಿಗೆ ಧ್ವನಿ ಮತ್ತು ಸಂದೇಶ ಆಧಾರಿತ ದೂರು ವೇದಿಕೆಯಾಗಿದ್ದು, ನಾಗರಿಕರು ತಮ್ಮ ಸ್ಥಳೀಯ ಭಾಷೆಗಳಲ್ಲಿ ನೈಜ ಸಮಯದ ಟ್ರ್ಯಾಕಿಂಗ್ ಮತ್ತು ಪ್ರತಿಕ್ರಿಯೆಯೊಂದಿಗೆ ದೂರುಗಳನ್ನು ನೋಂದಾಯಿಸಲು ಅನುವು ಮಾಡಿಕೊಡುತ್ತದೆ. ಇದಲ್ಲದೆ, 'ಅನ್ನ ಮಿತ್ರ' ಆಪ್, ಎಫ್ ಡಿಎಸ್ ವಿತರಕರು, ಆಹಾರ ನಿರೀಕ್ಷಕರು, ಜಿಲ್ಲಾ ಅಧಿಕಾರಿಗಳಿಗೆ ಪಡಿತರ ವಿತರಣೆಗಾಗಿ ನೈಜ ಸಮಯದ ನಿರ್ದೇಶನ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ. ಇದು ಮಾಸಿಕ ಮಾರಾಟ, ತಪಾಸಣೆ ವರದಿಗಳು ಮತ್ತು ಸರ್ಕಾರಿ ನವೀಕರಣಗಳ ಬಗ್ಗೆ ಮಾಹಿತಿಯನ್ನು ಸಹ ಒದಗಿಸುತ್ತದೆ.

**<><*<><>*><>**

ಭಾರತೀಯ ಸ್ಪರ್ಧಾತ್ಮಕ ಆಯೋಗದ ೧೬ನೇ ವಾರ್ಷಿಕೋತ್ಸವಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ದೆಹಲಿಯಲ್ಲಿಂದು ಚಾಲನೆ  ನೀಡಿದರು. ಈ ವೇಳೆ, ಭಾರತೀಯ ಸ್ಪರ್ಧಾತ್ಮಕ ಆಯೋಗದ ಅಧ್ಯಕ್ಷರಾದ  ರವನೀತ್ ಕೌರ್ ಮತ್ತಿತರರು ಉಪಸ್ಥಿತರಿದ್ದರು. ಬಳಿಕ ನಿರ್ಮಲಾ ಸೀತಾರಾಮನ್,  ಜಾಗತಿಕ ಮಟ್ಟದಲ್ಲಿ  ಹಲವು ದೇಶಗಳ ನಡುವೆ ವಹಿವಾಟಿಗಾಗಿ  ಸ್ಪರ್ಧೆ  ಏರ್ಪಟ್ಟಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ  ಭಾರತ ಮುಂಚೂಣಿಯಲ್ಲಿದೆ. ಸಮತೋಲಿತ ವ್ಯಾಪಾರ ನಿರ್ವಹಣೆ ಇಂದಿನ ಅಗತ್ಯತೆ ಆಗಿದ್ದು, ರಾಜಕೀಯ ಮತ್ತು ಪರಿಸರ ಸವಾಲುಗಳನ್ನು ಎದುರಿಸಬೇಕಿದೆ ಎಂದರು. ಮಾರುಕಟ್ಟೆಯಲ್ಲಿ ಸ್ಪರ್ಧೆಯನ್ನು ಜೀವಂತವಾಗಿಡುವಲ್ಲಿ ಮತ್ತು ಭಾರತೀಯ ಆರ್ಥಿಕತೆಯನ್ನು ಕ್ರಿಯಾಶೀಲವಾಗಿಸುವಲ್ಲಿ  ಭಾರತೀಯ ಸ್ಪರ್ಧಾತ್ಮಕ ಆಯೋಗದ ಪಾತ್ರ ಹಿರಿದು. ೨೦೪೭ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದಲ್ಲಿ ಆವಿಷ್ಕಾರ ಆಧಾರಿತ ಆರ್ಥಿಕ ಚೌಕಟ್ಟು ಮುಖ್ಯ ಎಂದು ತಿಳಿಸಿದರು. ಹಣ ಗಳಿಕೆ, ಹೂಡಿಕೆ ಹಿಂತೆಗೆತ ಮತ್ತು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯದಂತಹ ಭಾರತದಲ್ಲಿನ ರಚನಾತ್ಮಕ ಸುಧಾರಣೆಗಳು ಮಾರುಕಟ್ಟೆ ಸಾಮರ್ಥ್ಯವನ್ನು ಮುಕ್ತ ಮಾಡುವುದು ಮತ್ತು ಸ್ಪರ್ಧೆಯನ್ನು  ಗಟ್ಟಿಗೊಳಿಸುವುದು ಅಗತ್ಯವಾಗಿದೆ ಎಂದರು.

**<><*<><>*><>**

ಪ್ರಧಾನಿ ನರೇಂದ್ರ ಮೋದಿ, ನಾಡಿದ್ದು ರಾಜಸ್ಥಾನದ ಬಿಕನೇರ್‌ನಲ್ಲಿ ೨೬ ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಯೋಜನೆಗಳು ರೈಲ್ವೆ, ರಸ್ತೆಮಾರ್ಗಗಳು, ವಿದ್ಯುತ್, ನೀರು, ಹೊಸ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರಗಳನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ತಮ್ಮ ಭೇಟಿಯ ಸಮಯದಲ್ಲಿ ಪ್ರಧಾನಿಯವರು, ೧೮ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ೮೬ ಜಿಲ್ಲೆಗಳಲ್ಲಿ ೧೦೩ ಪುನರಾಭಿವೃದ್ಧಿಗೊಂಡ ಅಮೃತ್ ರೈಲ್ವೆ ನಿಲ್ದಾಣಗಳನ್ನು ಉದ್ಘಾಟಿಸಲಿದ್ದಾರೆ.  ಬಿಕನೇರ್-ಮುಂಬೈ ಎಕ್ಸ್‌ಪ್ರೆಸ್ ರೈಲಿಗೆ ಹಸಿರು ನಿಶಾನೆ ತೋರಲಿದ್ದಾರೆ. ಅಮೃತ್ ಭಾರತ್ ನಿಲ್ದಾಣ ಯೋಜನೆಯಡಿಯಲ್ಲಿ ಪ್ರಾದೇಶಿಕ ವಾಸ್ತುಶಿಲ್ಪವನ್ನು ಪ್ರದರ್ಶಿಸಲು ಮತ್ತು ಪ್ರಯಾಣಿಕರ ಸೌಲಭ್ಯಗಳನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾದ ೧ ಸಾವಿರದ ೩೦೦ ಕ್ಕೂ ಹೆಚ್ಚು ನಿಲ್ದಾಣಗಳನ್ನು ಆಧುನಿಕ ಸೌಲಭ್ಯಗಳೊಂದಿಗೆ ಪುನರಾಭಿವೃದ್ಧಿ ಮಾಡಲಾಗಿದೆ. ನಂತರ ಪ್ರಧಾನಿ ಅವರು, ಚುರು-ಸಾದುಲ್‌ಪುರ ರೈಲು ಮಾರ್ಗದ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಸೂರತ್‌ಗಢ-ಫಲೋಡಿ, ಫುಲೇರಾ-ದೇಗಾನಾ, ಉದಯಪುರ-ಹಿಮ್ಮತ್‌ನಗರ, ಫಲೋಡಿ-ಜೈಸಲ್ಮೇರ್ ಮತ್ತು ಸಮದಾರಿ-ಬಾರ್ಮೇರ್ ರೈಲು ಮಾರ್ಗದ ವಿದ್ಯುದ್ದೀಕರಣ ಯೋಜನೆಗಳನ್ನು ರಾಷ್ಟ್ರಕ್ಕೆ ಅರ್ಪಿಸಲಿದ್ದಾರೆ.

<><*<><>*><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇದೇ ತಿಂಗಳ ೨೫ ರಂದು ಪ್ರಸಾರವಾಗಲಿರುವ ಆಕಾಶವಾಣಿಯ ಜನಪ್ರಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ದೇಶ-ವಿದೇಶದಲ್ಲಿರುವ ಭಾರತೀಯರೊಂದಿಗೆ ತಮ್ಮ ಮನದ ಮಾತನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ನ ೧೨೨ನೇ ಆವೃತ್ತಿಯಾಗಿದೆ. ಉಚಿತ ದೂರವಾಣಿ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಮನದಮಾತಿನ ಸಂಚಿಕೆಗೆ ಸಾರ್ವಜನಿಕರು ತಮ್ಮ ಆಲೋಚನೆ, ಸಲಹೆಗಳನ್ನು ಸಲ್ಲಿಸಬಹುದಾಗಿದೆ. ನರೇಂದ್ರ ಮೋದಿ ಆಪ್ ಅಥವಾ ಮೈಗೌ ಓಪನ್ ಫೋರಂ ಮೂಲಕ ಜಾಲತಾಣದಲ್ಲಿ ಜನರು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದು. ಮುಂಬರುವ ಸಂಚಿಕೆಗೆ ಸಲಹೆಗಳನ್ನು ಈ ತಿಂಗಳ ೨೩ ರವರೆಗೆ ಸ್ವೀಕರಿಸಲಾಗುತ್ತದೆ.

<><*<><>*><>

ಪರಮಾಣು ಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಡಾ.ಎಂ.ಆರ್ ಶ್ರೀನಿವಾಸನ್ ಇಂದು ತಮಿಳುನಾಡಿನ ಊಟಿಯಲ್ಲಿ ನಿಧನರಾದರು. ೯೫ ವರ್ಷ ವಯಸ್ಸಿನ ಈ ವಿಜ್ಞಾನಿ ಭಾರತದ ಪರಮಾಣುದಲ್ಲಿ ವಿಶಿಷ್ಟ ವ್ಯಕ್ತಿಯಾಗಿದ್ದು, ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಭಾರತದ ಪರಮಾಣು ಇಂಧನ ಕಾರ್ಯಕ್ರಮದ ದಿಗ್ಗಜರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ದುಃಖ ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಡಾ.ಶ್ರೀನಿವಾಸನ್ ಅವರು ನಿರ್ಣಾಯಕ ಪರಮಾಣು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ, ಇದು ಇಂಧನ ಕ್ಷೇತ್ರದಲ್ಲಿ ಭಾರತದ ಸ್ವಾವಲಂಬನೆಗೆ ಅಡಿಪಾಯ ಹಾಕಿದೆ ಎಂದು ಪ್ರಧಾನಿ ಹೇಳಿದ್ದಾರೆ.

<><*<><>*><>

ಹಿರಿಯ ಖಗೋಳ ಭೌತಶಾಸ್ತ್ರಜ್ಞ ಜಯಂತ್ ನಾರ್ಲಿಕರ್ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ ಪ್ರಧಾನಿ, ನಾರ್ಲಿಕರ್ ಅವರ ನಿಧನ ವಿಜ್ಞಾನಿಗಳ ಸಮುದಾಯಕ್ಕೆ ಅಪಾರ ನಷ್ಟ ಉಂಟು ಮಾಡಿದೆ ಎಂದು ಹೇಳಿದ್ದಾರೆ.

<><*<><>*><>

ಬೆಂಗಳೂರಿನಲ್ಲಿ ಇನ್ನೂ ಮೂರು ದಿನಗಳ ಕಾಲ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ ಹಿನ್ನೆಲೆಯಲ್ಲಿ ಇದೇ ೨೩ ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಸನ್ ರೈಸರ್ಸ್ ಹೈದರಾಬಾದ್ ನಡುವಿನ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯವನ್ನು ಲಕ್ನೋಗೆ ಸ್ಥಳಾಂತರಗೊಳಿಸಲಾಗಿದೆ.

<><*<><>*><>

ಸ್ಕ್ವಾಷ್‌ನಲ್ಲಿ, ಭಾರತದ ಆಕಾಂಕ್ಷಾ ಸಲುಂಖೆ ಇಂದು ಐರ್ಲೆಂಡ್‌ನ ಡಬ್ಲಿನ್‌ನಲ್ಲಿ ನಡೆಯಲಿರುವ ಐರಿಶ್ ಓಪನ್ ೨೦೨೫ ರಲ್ಲಿ ತಮ್ಮ ಅಭಿಯಾನವನ್ನು ಪ್ರಾರಂಭಿಸಲಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು<>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ<>*><>**